



**ಚಟುವಟಿಕೆ 5: ಮನೆಯ ಸುತ್ತಲೂ ಸಿಕ್ಕ ವಸ್ತುಗಳೊಂದಿಗೆ ಸ್ವಯಂ ಭಾವಚಿತ್ರವನ್ನು ಹೊಂದಿಸುವುದು**

**ವಯಸ್ಸು:** ಆರು ವರ್ಷ ಮತ್ತು ಮೇಲ್ಪಟ್ಟು

**ವಸ್ತುಗಳು:** ಕಲ್ಲುಗಳು, ಎಲೆಗಳು, ಮಣ್ಣು, ಹಗ್ಗ, ದಾರ, ಹೂಗಳು, ಮರಳು, ಬೀಜಗಳು, ತ್ಯಾಜ್ಯ ತರಕಾರಿಗಳು ಇತ್ಯಾದಿ.

**ಹಂತ 1: ನಿಮ್ಮ ಮನೆಯ ಸುತ್ತಲೂ ಸೂಕ್ಷ್ಮವಾಗಿ ಗಮನಿಸಿ ನಿಮ್ಮ ಮುಖವನ್ನು ಹೊಂದಿಸಲು ಬೇಕಾದ ವಸ್ತುಗಳನ್ನು(ಕಲ್ಲುಗಳು, ಎಲೆಗಳು, ಮಣ್ಣು, ಹಗ್ಗ, ಇತ್ಯಾದಿ.) ಹುಡುಕಿ.**

**ನೆನಪಿನಲ್ಲಿಡಬೇಕಾದ ಅಂಶಗಳು:**

1. ನಿಮ್ಮೊಂದಿಗೆ ಚಟುವಟಿಕೆಯನ್ನು ಮಾಡಲು ಸಾಧ್ಯವಾದರೆ, ಒಬ್ಬ ಸ್ನೇಹಿತ ಅಥವಾ ಅಣ್ಣ-ತಮ್ಮ, ಅಕ್ಕ-ತಂಗಿಯನ್ನು ಆರಿಸಿಕೊಳ್ಳಿ.
2. ಅವರಿಗೂ ಸಹ ಅದೇ ಚಟುವಟಿಕೆಯನ್ನು ಪ್ರತ್ಯೇಕವಾಗಿ ಮಾಡಲು ಹೇಳಿ.

3. ನಿಮ್ಮ ಮುಖದ ಭಾವಚಿತ್ರವನ್ನು ಹೊಂದಿಸಲು ನಿಮ್ಮ ಮನೆಯ ಸುತ್ತಲೂ ಏನೆಲ್ಲಾ ವಸ್ತುಗಳು ಸಿಗಬಹುದೆಂದು ಹುಡುಕಿ ನೋಡಿ ಮತ್ತು ಅವುಗಳನ್ನು ಒಂದು ಟೇಬಲ್ ಅಥವಾ ನೆಲದ ಮೇಲೆ ನಿಮ್ಮ ಮುಖವನ್ನು ಹೋಲುವ ಹಾಗೆ ಹೊಂದಿಸಿ.
4. ನಿಮ್ಮ ಮುಖವನ್ನು ಹೊಂದಿಸಲು ಕನಿಷ್ಠ ಐದು ವಿಭಿನ್ನ ವಸ್ತುಗಳನ್ನು(ಕಲ್ಲುಗಳು, ಎಲೆಗಳು, ಮಣ್ಣು, ಹಗ್ಗ, ದಾರ, ಹೂಗಳು, ಮರಳು, ಇತ್ಯಾದಿ.) ಹುಡುಕಿ.
5. ಕನ್ನಡಿಯಲ್ಲಿ ನಿಮ್ಮ ಮುಖದ ಆಕಾರವನ್ನು(ವೃತ್ತ, ತ್ರಿಭುಜ, ಆಯತ ಇತ್ಯಾದಿ) ನೋಡಿ ಮತ್ತು ನಿಮ್ಮ ಮುಖದ ಎಲ್ಲಾ ಭಾಗಗಳನ್ನು ಸೂಕ್ಷ್ಮವಾಗಿ (ಮೂಗು, ಕಿವಿ, ಕಣ್ಣು, ಇತ್ಯಾದಿ) ಗಮನಿಸಿ.
6. ನೀವು ಆರಿಸಿದ ವಸ್ತುಗಳನ್ನು ಬಳಸಿಕೊಂಡು ನಿಮ್ಮ ಮುಖದ ದೊಡ್ಡ ಭಾಗದಿಂದ ಪ್ರಾರಂಭಿಸಿ ಮುಖದ ಆಕಾರಗಳನ್ನು ಹೊಂದಿಸಲು ವಸ್ತುಗಳನ್ನು ಜೋಡಿಸಿ. ಗಾಳಿಗೆ ಸುಲಭವಾಗಿ ಹಾರಿ ಹೋಗುವಂತಹ ವಸ್ತುಗಳನ್ನು ಬಳಸಬೇಡಿ.
7. ನಿಮ್ಮ ಮುಖದಲ್ಲಿರುವ ಸೂಕ್ಷ್ಮ ವಿವರಗಳಾದ ಮೂಗು, ಕಿವಿ, ಕಣ್ಣು ಮುಂತಾದುವುಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವುಗಳನ್ನು ಹೊಂದಿಸಲು ಯಾವೆಲ್ಲಾ ವಸ್ತುಗಳು ಬೇಕಾಗಬಹುದು ಎಂದು ಆಲೋಚಿಸಿ.
8. ನೀವು ಮುಖವನ್ನು ವಸ್ತುಗಳಿಂದ ಹೊಂದಿಸಿದ ನಂತರ ಫೋಟೋವನ್ನು ತೆಗೆದುಕೊಳ್ಳಿ.

**ನಿಮ್ಮ ಚಟುವಟಿಕೆಯ ಭಾಗೀದಾರರೊಂದಿಗೆ ಮಾಡಬಹುದಾದ ಅಂಶಗಳು :**

1. ಚಟುವಟಿಕೆ ಪೂರ್ಣಗೊಂಡ ನಂತರ ಇಬ್ಬರ ಭಾವಚಿತ್ರವನ್ನು ಒಬ್ಬರಿಗೊಬ್ಬರು ತೋರಿಸಿ.
2. ನಿಮ್ಮ ಭಾಗಿದಾರರು ನೀವು ಹೊಂದಿಸಿದ ಭಾವಚಿತ್ರವನ್ನು ನೋಡಿ ಅದಕ್ಕೆ ಏನಾದರೂ ಹೊಸದನ್ನು ಸೇರಿಸಲು ಹೇಳಿದರೆ ಅದನ್ನು ಸೇರಿಸಿ ಚಿತ್ರವನ್ನು ಪೂರ್ತಿಗೊಳಿಸಿ.

ART SPARKS
CURIOSITY. CREATIVITY. LEARNING.

*ArtSparks Foundation*

*[www.art-sparks.org](http://www.art-sparks.org)*